
# ದಾಂಪತ್ಯವೆಂಬ 'ದಿವ್ಯ'

ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಶಂತನು ರಾಜ ಸತ್ಯವತಿಯನ್ನು ಭೇಟಿಯಾಗುವ ಸನ್ನಿವೇಶ ಧ್ವನಿ ಪೂರ್ಣವಾದುದು. ಬೇಟೆಗಾಗಿ ಕಾಡಿಗೆ ಬಂದಿದ್ದ ಶಂತನು ಅನಿರೀಕ್ಷಿತವಾಗಿ ಎದುರಾದ ಪರಮ ಸುಂದರಿ ಸತ್ಯವತಿಯನ್ನು ಕಂಡು 'ಮಧುಪ'ನಂತೆ ಮನಸೋಲುತ್ತಾನೆ; ಆಕೆಯ ಕೈ ಹಿಡಿದು 'ನೀಂ ಬಾ, ಪೋಪಂ' ಎನ್ನುತ್ತಾ ತನ್ನ ತೀವ್ರಾನುರಾಗವನ್ನು ವ್ಯಕ್ತಪಡಿಸುತ್ತಾನೆ. ಶಂತನು ಸತ್ಯವತಿಯ ಕೈ ಹಿಡಿದುದನ್ನು ಕವಿ– 'ನಲ್ಮೆಗೆ ದಿಬ್ಯಂಬಿಡಿವಂತೆ' ಎಂಬ ಉಪಮಾನವನ್ನು ಬಳಸಿ ವರ್ಣಿಸಿದ್ದಾನೆ, 'ದಿಬ್ಯ' ಎಂಬುದು ಸಂಸ್ಕೃತದ 'ದಿವ್ಯ' ಎನ್ನುವುದರ ತದ್ಭವ, 'ದಿವ್ಯ' ಎನ್ನುವುದು Divine ಎನ್ನುವುದರ ಸಮಾನಾರ್ಥಕ ಪದ. ಈ ಪದಕ್ಕೆ ಪವಿತ್ರ, ಶ್ರೇಷ್ಠ, ಸುಂದರ ಎಂಬ ಅರ್ಥಗಳು ಪ್ರಚಲಿತ. 'ದಿವ್ಯ' ಎನ್ನುವುದಕ್ಕೆ 'ಪರೀಕ್ಷೆ' Ordeal ಎಂಬ ಇನ್ನೊಂದು ಅರ್ಥವೂ ಇದೆ. ಒಬ್ಬ ವ್ಯಕ್ತಿ ನಿಜವಾದ ಅಪರಾಧಿಯೋ ಅಲ್ಲವೋ ಎಂಬುದನ್ನು ಪತ್ತೆಮಾಡಲು ಸಾಮಾನ್ಯ ಪುರಾವೆಗಳು ಅಸಮರ್ಥವಾದಾಗ, ಅಗ್ನಿ, ವಿಷ, ಕಾಯಿಸಿದ ಲೋಹ ಮುಂತಾದವುಗಳ ಸಹಾಯವನ್ನು ಪಡೆಯುತ್ತಿದ್ದರೆಂದು ಧರ್ಮಶಾಸ್ತ್ರಗಳಲ್ಲಿ ಉಲ್ಲೇಖವಿದೆ. ಅಗ್ನಿ ದಿವ್ಯ, ಪಾಷಾಣ ದಿವ್ಯ, ತಪ್ತಮಾಲಾ ದಿವ್ಯ– ಹೀಗೆ ಹಲವು ದಿವ್ಯಗಳು ನಮ್ಮ ಪ್ರಾಚೀನರಲ್ಲಿ ಬಳಕೆಯಲ್ಲಿದ್ದುವಂತೆ, ಒಟ್ಟಿನಲ್ಲಿ 'ದಿವ್ಯ'ವೆಂದರೆ, ವ್ಯಕ್ತಿಯ ಪಾವಿತ್ರ್ಯವನ್ನು ಪರೀಕ್ಷಿಸುವ ಒಂದು ಪ್ರಕ್ರಿಯೆಯೆನ್ನಬಹುದು, ಸತ್ಯವತಿಯ ಕೈಯನ್ನು ಶಂತನು ಹಿಡಿದುದು 'ದಿವ್ಯವನ್ನು ನಲ್ಮೆ ಹಿಡಿದಂತೆ' ಎನ್ನುವುದರಲ್ಲಿ ಶಂತನುವಿನ ಪ್ರೇಮ ಕೇವಲ ಕ್ಷಣಿಕ ಮೋಹವಲ್ಲ, ಸ್ಥಿರವಾದುದು, ಪರಿಶುದ್ಧವಾದುದು– ಎಂಬ ಧ್ವನಿಯಿದೆ, ಇಂಥ ಪ್ರೇಮವೇ ಆದರ್ಶದಾಂಪತ್ಯದ ಅಡಿಪಾಯವೆನ್ನಬಹುದು.

ಕೆ.ಎಸ್.ನ. ಹೇಳುವಂತೆ 'ಒಂದು ಗಂಡು, ಒಂದು ಹೆಣ್ಣು ಹೇಗೋ ಸೇರಿ ಹೊಂದಿಕೊಂಡು, ಕಾಣದೊಂದು ಕನಸು ಕಂಡು' ವೈವಾಹಿಕ ಬದುಕನ್ನು ಪ್ರಾರಂಭಿಸುತ್ತಾರೆ, ನಿಜ, ಆದರೆ ಕ್ರಮೇಣ ಇಂಥ ಕನಸು ಕರಗಿ, ಅವರು ವಾಸ್ತವಕ್ಕೆ ಮುಖಾಮುಖಿಯಾಗಲೇ ಬೇಕಾಗುತ್ತದೆ. ದಾಂಪತ್ಯ ಜೀವನದ 'ದಿವ್ಯ' ಪ್ರಾರಂಭವಾಗುವುದು ಆಗಲೇ, ಅರ್ಥಾತ್ ಬದುಕಿನ ಏರಿಳಿತಗಳನ್ನು ಹಾದು, ನೆಳಲು–ಬೆಳಕುಗಳನ್ನು ಅನುಭವಿಸಿ, ಆಕರ್ಷಣೆ–ವಿಕರ್ಷಣೆಗಳನ್ನು ಎದುರಿಸುವ ದಂಪತಿಗೆ ನಿಜವಾದ 'ದಿವ್ಯ'ದ (ಪರೀಕ್ಷೆಯ) ಅನುಭವವಾಗುತ್ತದೆ. ಈ ಪರೀಕ್ಷೆಯಲ್ಲಿ ಯಶಸ್ವಿಯಾಗಬೇಕಾದರೆ ಪತಿ ಪತ್ನಿಯರಿಬ್ಬರಲ್ಲೂ ನಿಷ್ಠೆ,



ಪರಿಶುದ್ಧತೆ, ಪರಸ್ಪರ ನಂಬಿಕೆ, ಪ್ರೀತಿ, ಸಹಸ್ಪಂದನ– ಮುಂತಾದುವು ಅಚಲವಾಗಿರಬೇಕಾದುದು ಅತ್ಯಂತ ಅಗತ್ಯ. ಆದ್ದರಿಂದಲೇ ಹಿಂದೂ ವಿವಾಹ ಪದ್ಧತಿಯಲ್ಲಿ ಧರ್ಮ, ಅರ್ಥ, ಕಾಮ –ಈ ಮೂರರಲ್ಲೂ ಪರಸ್ಪರ ಅನುವರ್ತಿಗಳಾಗಿರ ಬೇಕೆಂದೂ, ಅತಿಕ್ರಮಣ ಕೂಡದೆಂದೂ ಪತಿ ಪತ್ನಿಯರು ಪ್ರತಿಜ್ಞೆ ಮಾಡುತ್ತಾರೆ. ವೈವಾಹಿಕ ದೀಕ್ಷೆಯನ್ನು ಸ್ವೀಕರಿಸಿದ ಗಂಡು ಹೆಣ್ಣು ಪರಸ್ಪರ ಅಖಂಡವಾಗಿ ಪ್ರೀತಿಸುತ್ತಾ, ಒಬ್ಬರ ಅರಕೆಯನ್ನು ಇನ್ನೊಬ್ಬರು ತುಂಬುತ್ತಾ, ಪರಸ್ಪರ ಹಿತವನ್ನು ಬಯಸುತ್ತಾ, ವೈಯಕ್ತಿಕ ಬಯಕೆಗಳಿಗಿಂತ ಕೌಟುಂಬಿಕ ಕ್ಷೇಮಕ್ಕೇ ಮಹತ್ವ ಕೊಡುತ್ತಾ ಬದುಕಿದಾಗ ವಿವಾಹಕ್ಕೊಂದು ಸಾರ್ಥಕತೆ ಬರುತ್ತದೆ. 'Marriage is not a union merely between two creatures ; 'It is a union between two spirits' ಎಂಬ ಹೇಳಿಕೆ ಇದನ್ನೇ ಸಮರ್ಥಿಸುತ್ತದೆ.

ದಾಂಪತ್ಯದಲ್ಲಿ ಪ್ರೀತಿ, ಪಾವಿತ್ರ್ಯ, ನಿಷ್ಠೆ, ಸಾಮರಸ್ಯಗಳನ್ನು ಕೊನೆಯವರೆಗೂ ಉಳಿಸಿಕೊಂಡು ಬರುವುದು ನಿಜಕ್ಕೂ ಒಂದು 'ದಿವ್ಯ'ವೇ ಸರಿ. ಇಂಥ ದಾಂಪತ್ಯ ದಿವ್ಯದಲ್ಲಿ ತೇರ್ಗಡೆಯಾಗುವವರ ಪಾಲಿಗೆ ವೈವಾಹಿಕ ಜೀವನವೆಂಬುದು ಕೇವಲ ದೈಹಿಕ ಕಾಮನೆಯಿಂದ ಅಥವಾ ವ್ಯಾವಹಾರಿಕ ಕಾರಣದಿಂದ ಕೂಡಿ ಬಾಳುವ ವ್ಯವಸ್ಥೆಯಾಗುವುದಿಲ್ಲ. ಅದೊಂದು 'ದಿವ್ಯ ದಾಂಪತ್ಯ'ವೆನ್ನಿಸಿಕೊಳ್ಳುತ್ತದೆ. ಇಂಥ ದಾಂಪತ್ಯಗಳಿಂದ ವ್ಯಕ್ತಿ ಜೀವನದ ಉದಾತ್ತೀಕರಣ ಮಾತ್ರವಲ್ಲ, ಸಮಷ್ಟಿಯ ಹಿತವೂ ಸಾಧಿತವಾಗುತ್ತದೆ. ಪರಿಶುದ್ಧ ವೈವಾಹಿಕ ಜೀವನ ಹಾಗೂ ಹಿತವಾಗಿರುವ ಕೌಟುಂಬಿಕ ಬಾಂಧವ್ಯ– ಎರಡೂ ಸುಖೀ ಸಮಾಜದ ಬುನಾದಿ– ಎಂಬುದು ಸುಳ್ಳಲ್ಲ.

■ ವೈನತೇಯ

## ಮಾತೇ ಮುತ್ತು

ಪ್ರೇಮಕ್ಕೆ ಕಣ್ಣಿಲ್ಲ; ಆದರೆ ಮದುವೆ 'ದೃಷ್ಟಿ'ಯನ್ನು ತಂದು ಕೊಡುತ್ತದೆ.
-ಲಿಚೆನ್ ಬರ್ಗ್

ಯೋಗ್ಯ ಸಂಗಾತಿಯನ್ನು ಹುಡುಕುವುದರಿಂದ ಮದುವೆ ಯಶಸ್ವಿ ಆಗುವುದಿಲ್ಲ; ಯೋಗ್ಯ ಸಂಗಾತಿ ಆಗುವುದರಿಂದ ಯಶಸ್ವಿ ಆಗುತ್ತದೆ.
-ಬ್ರಿಕ್ನರ್

ಪ್ರಾಮಾಣಿಕರು ಬೇಗ ಮದುವೆ ಆಗುತ್ತಾರೆ; ಜಾಣರು ಎಂದೂ ಮದುವೆ ಆಗರು.
-ಇಂಗ್ಲಿಷ್ ಗಾದೆ

ಮದುವೆಯೇ ಸ್ವರ್ಗ; ಮದುವೆಯೇ ನರಕ.
-ಜರ್ಮನ್ ಗಾದೆ

ನಮಗೆ ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ, ಸರ್ವಸ್ತರದ ಉದಯ.
-ಕುವೆಂಪು

ಜಾತಿ ಶ್ರಮವನ್ನು ಮಾತ್ರ ವಿಭಜಿಸುವುದಿಲ್ಲ; ಶ್ರಮಿಕರನ್ನೂ ವಿಭಜಿಸುತ್ತದೆ.
-ಬಿ.ಆರ್.ಅಂಬೇಡ್ಕರ್

ಮಕ್ಕಳಿಲ್ಲದವರಿಗೆ ಗತಿಯಿಲ್ಲ; ಮಕ್ಕಳೇ ಸ್ವರ್ಗದ ಬಾಗಿಲು.
-ವಿ.ಎಂ.ಇನಾಂದಾರ್

ನಿಮ್ಮ ಮಾತನ್ನು ನೀವೇ ಕೇಳಿಸಿಕೊಳ್ಳುವುದರಿಂದ ಏನನ್ನೂ ಕಲಿಯಲಾರಿರಿ, ಇತರರು ಹೇಳುವುದನ್ನು ಗಮನ ಕೊಟ್ಟು ಕೇಳಿಸಿಕೊಳ್ಳಿ.
-ಲಿಯೋ ಬುಸ್ಕಾಗ್ಲಿ

ಕುವರನಾದೊಡೆ ಬಂದ ಗುಣವೇನದರಿಂದೆ, ಕುವರಿಯಾದೊಡೆ ಕುಂದೇನು?
-ಸಂಚಿ ಹೊನ್ನಮ್ಮ

ಹಿಂದು, ಮುಸ್ಲಿಮನಾಗು, ಬೌದ್ಧ, ಕ್ರೈಸ್ತನೇ ಆಗು; ಏನಾದರೂ ಸರಿಯೆ, ಮೊದಲು ಮಾನವ ನಾಗು.
-ಕಾವ್ಯಾನಂದ (ಸಿದ್ದಯ್ಯ ಪುರಾಣಿಕ)

ದೊಡ್ಡವರ ಬಗ್ಗೆ ಕೆಟ್ಟದ್ದನ್ನು ಹೇಳುವವನಷ್ಟೇ ಅಲ್ಲದೆ, ಅದನ್ನು ಕೇಳುವವನೂ ಪಾಪಿಯಾಗುತ್ತಾನೆ.
-ಕಾಳಿದಾಸ

'ಸುಮುಹೂರ್ತ ಸಾವಧಾನ' ಎಂದು ನಮ್ಮ ಮದುವೆಯಾಯಿತಲ್ಲ! ಜೀವನವು ಯಾವಾಗಲೂ ಸುಮುಹೂರ್ತವೇ ಸರಿ, ಆದರೆ ಅದು ಸಾವಧಾನವನ್ನು ಬೇಡುತ್ತದೆ.
-ವಿ.ಕೃ.ಗೋಕಾಕ

ಮರ್ಯಾದೆ ಕಾಪಾಡಿಕೊಳ್ಳುವುದು ಶ್ರೀಮಂತನಾಗುವುದಕ್ಕಿಂತ ಕಷ್ಟ.
-ಐರಿಶ್ ಗಾದೆ

ಆಡಿದ ತಕ್ಷಣ ಮಾತು ಸಾಯುತ್ತದೆ ಎನ್ನುವವರಿದ್ದಾರೆ. ನನಗೆ ಅನ್ನಿಸುತ್ತದೆ– ಆಡಿದ ತಕ್ಷಣ ಮಾತಿಗೆ ಜೀವ ಬರುತ್ತದೆ– ಎಂದು.
-ಎಮಿಲಿ ಡಿಕಿನ್‌ಸನ್

ದುಡಿಯುವವನೇ ದಡ್ಡ; ಮಾತನಾಡುವವನೇ ದೊಡ್ಡ.
-ಬೀಚಿ